**<u>ಸಾಕ್ಷಿಯನ್ನು ದಿಃ 22.02.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಿರ್ಯಾದುದಾರರ ಸ್ವ ಇಚ್ಛಾ ಹೇಳಿಕೆ</u>** :

ದಿನಾಂಕಃ24.03.2016 ರಂದು ಆರೋಪಿಗಳು ನನ್ನ ಮತ್ತು ನನ್ನ ಮಗಳ ಪರವಾಗಿ ಬರೆದುಕೊಟ್ಟಿರುವ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಸಿ-1 ಎಂದು ಗುರ್ತಿಸಲಾಯಿತು. ದಿನಾಂಕಃ23.01.2017 ರಂದು ಆರೋಪಿಗಳು ಈ ಪ್ರಕರಣದ 5ನೇ ದೂರುದಾರರ ಪರವಾಗಿ ಎ-404 ಫ್ಲಾಟ್ ಅನ್ನು ಖರೀದಿಸಿರುತ್ತಾರೆ. ಸದರಿ ಕ್ರಯ ಪತ್ರದ ದೃಢೀಕೃತ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಸಿ-2 ಎಂದು ಗುರ್ತಿಸಲಾಯಿತು. ಆರೋಪಿಗಳು ನಾವು ಖರೀದಿಸಿದ ಸ್ವತ್ತುಗಳು ಮತ್ತು ಇತರೆ ಸ್ವತ್ತುಗಳ ಸಂಬಂಧ ಯೋಜನೆ ರೂಪಿಸಿ ಈ ಸಂಬಂಧ ಬ್ರೋಚರ್ ಅನ್ನು ಹೊರಡಿಸಿದ್ದರು, ಅದನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಸಿ-3

ಎಂದು ಗುರ್ತಿಸಲಾಯಿತು. ಸದರಿ ಬ್ರೋಚರ್ ಜೊತೆಯಲ್ಲಿ ಅನುಮೋದಿತ ನಕ್ಷೆಯ ಜೆರಾಕ್ಸ್ ಪ್ರತಿಯನ್ನು ನೀಡಿದ್ದರು. ಅದನ್ನು ನಿಸಿ-4 ಎಂದು ಗುರ್ತಿಸಲಾಯಿತು. ಈಗ ಆರೋಪಿಗಳು ಹೊಸ ಅನುಮೋದಿತ ನಕ್ಷೆಯನ್ನು ಪಡೆದಿರುತ್ತಾರೆ. ಅದನ್ನು ಸಹ ಹಾಜರುಪಡಿಸಿರುತ್ತೇನೆ. ಅದನ್ನು ನಿಸಿ-5 ಎಂದು ಗುರ್ತಿಸಲಾಯಿತು. ನಾನು ಈ ದಿನ ಶರದಿಂದು ಹಿರಿಯರ ವಸತಿ ಸಮುಚ್ಚಯದ Deed of Declaration (Administrative Manual) ಹಾಜರುಪಡಿಸಿರುತ್ತೇನೆ. ಅದನ್ನು ನಿಸಿ-6 ಎಂದು ಗುರ್ತಿಸಲಾಯಿತು.

ಆರೋಪಿಗಳು ತಮ್ಮ ಬ್ರೋಚರ್ ನಲ್ಲಿ 12500 ಚ.ಅಡಿಗಳು ಕ್ಲಬ್ ಹೌಸ್ ಇರುತ್ತದೆ ಎಂದು ನಮೂದಿಸಿದ್ದರು. 2016 ರ ಅನುಮೋದಿತ ನಕ್ಷೆಯಲ್ಲಿ 15000 ಚ.ಅಡಿಗಳು ಕ್ಲಬ್ ಹೌಸ್ ಇರುತ್ತದೆ ಎಂದು ನಮೂದಿಸಿದರು. ಆದರೆ ಆರೋಪಿಗಳು 6000 ಚ.ಅಡಿಗಳು ಪ್ರದೇಶದಲ್ಲಿ ಮಾತ್ರ ಕ್ಲಬ್ ಹೌಸ್ ಅನ್ನು ನಿರ್ಮಾಣ ಮಾಡಿರುತ್ತಾರೆ.

ಆರೋಪಿಗಳು ತಮ್ಮ ಬ್ರೋಚರ್ ಮತ್ತು ನಕ್ಷೆಯಲ್ಲಿ ತಿಳಿಸಿದಂತೆ ಈಜುಕೊಳ ಮತ್ತು ಇನ್ನಿತರೆ ಮೂಲಭೂತ  ಸೌಕರ್ಯಗಳನ್ನು ನಿರ್ಮಾಣ ಮಾಡಿರುವುದಿಲ್ಲ. ಆರೋಪಿಗಳು ನಮ್ಮಿಂದ ಪ್ರತಿ ತಿಂಗಳು ಸುಮಾರು 5000/- ದೈನಂದಿನ ನಿರ್ವಹಣೆ ವೆಚ್ಚ  ತೆಗೆದುಕೊಳ್ಳುತ್ತಿದ್ದರು. ಈ ಬಗ್ಗೆ ಆರೋಪಿಗಳು ಜಿ.ಎಸ್.ಟಿ. ಅನ್ನು ಕಟ್ಟಿರುವುದಿಲ್ಲ. ಆರೋಪಿಗಳು ನಮ್ಮಿಂದ One time maintenance carpus ಎಂದು ಮೊಬಲಗು 50 ಸಾವಿರ ರೂಗಳಿಂದ 1 ಲಕ್ಷದ 50 ಸಾವಿರ ರೂಗಳವರೆಗೆ ಸಂಗ್ರಹಣೆ ಮಾಡಿದ್ದು ಅದನ್ನು Owners Association ಗೆ ಪಾವತಿ ಮಾಡಿರುವುದಿಲ್ಲ. ಆರೋಪಿಗಳು 2016 ರಿಂದಲೂ ನಮ್ಮಿಂದ ಎಸ್.ಟಿ.ಪಿ ಬಾಬ್ತು ಹಣವನ್ನು ಸಂಗ್ರಹಣೆ ಮಾಡಿರುತ್ತಾರೆ, ಆದರೆ ಆರೋಪಿಗಳು 2021 ರ ನಂತರ ಮಾತ್ರ ಎಸ್.ಟಿ.ಪಿ ಅನುಮೋದನೆ ಪಡೆದು ಪಾವತಿ ಮಾಡುತ್ತಿರುತ್ತಾರೆ. ಈ ಮೂಲಕ ನಮಗೆ ಆರೋಪಿಗಳು

ಒಪ್ಪಿಕೊಂಡಂತೆ ನಡೆದುಕೊಳ್ಳದೆ ನಂಬಿಕೆ ದ್ರೋಹ ಮತ್ತು ಮೋಸ ಮಾಡಿರುತ್ತಾರೆ. ಆದ್ದರಿಂದ ಆರೋಪಿತರ ವಿರುದ್ದ ಕ್ರಯ ಕೈಗೊಳ್ಳಲು ಕೋರಿಕೊಳ್ಳುತ್ತೇನೆ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

**ಓ ಹೇ ಕೇ ಸ ಇ**

**4ನೇ ಅ ಮು ನ್ಯಾ ದಂ ನ್ಯಾ**